ಬೀದರ್ ಜಿಲ್ಲೆಯಲ್ಲಿ ಅನಾವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಬೀಜ ಗೋಬ್ಬರ ಕೊಡುವುದು.

೨೧೭ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಬೀದರ್ ಜಿಲ್ಲೆಗೆ ಕೃಷಿ ಮಂತ್ರಿಗಳು ಇತ್ತೀಚೆಗೆ ಭೇಟಿ ಇತ್ತಾಗ ಅನಾವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಬೀಜ ಗೊಬ್ಬರ ಕೊಡುವ ಆಶ್ವಾಸನೆ ಕೊಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಇದರ ಬಿಡುಗಡೆ ಇದುವರೆವಿಗೆ ಆಗಿದೆಯೇ?

ಇ) ಆಗಿದ್ದಲ್ಲಿ, ಎಷ್ಟಾಗಿದೆ, ಬಿಡುಗಡೆ ಮಾಡಿರುವ ಬೀಜದ ಪ್ರಮಾಣವೆಷ್ಟು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು.)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಾಸನ ಪಟ್ಟಣದ ಬಸ್‌ಸ್ಟ್ಯಾಂಡ್ ರಸ್ತೆ ದುರಸ್ಥಿಯ ಬಗ್ಗೆ

೧೯೯ ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಪಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಪಟ್ಟಣದ ಬಸ್‌ಸ್ಟ್ಯಾಂಡಿನ ಟಾರು ರಸ್ತೆಯ ಅನೇಕ ಕಡೆ ಕಿತ್ತುಹೋಗಿದ್ದು ೧.೫ ಯಿಂದ ೨ ಅಡಿಗಳ ನೂರಾರು ಗುಂಡಿಗಳು ಬಿದ್ದಿದು ಮಳೆಗಾಲದಲ್ಲಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಆ) ಹಾಗಿದ್ದಲ್ಲಿ ಈ ರಸ್ತೆಗಳನ್ನು ದುರಸ್ತಿ ಮಾಡದಿರಲು ಕಾರಣಗಳೇನು?

ಶ್ರೀ ಕೆ.ಜೆ. ಚಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು.)

ಅ) ಹೌದು.

ಆ) ಈಗ ದುರಸ್ತಿ ಪಡಿಸಲಾಗಿದೆ.

ಹಾಸನದ ಹತ್ತಿರ ಡಿವಿಜನಲ್ ವರ್ಕ್‌ಷಾಪ್ ಕಟ್ಟಲು ವಶಪಡಿಸಿಕೊಂಡಿರುವ ಜಮೀನಿನ ಬಗ್ಗೆ

೧೯೭. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಪಟ್ಟಣದ ಸಮೀಪದಲ್ಲಿರುವ ಆಡುವಳ್ಳಿ ಮತ್ತು ಸತ್ಯಮಂಗಲ ಗ್ರಾಮಗಳ ಸುಮಾರು ೯೨ ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ.ಯವರು ಡಿವಿಜನಲ್ ವರ್ಕ್‌ಷಾಪ್ ಕಟ್ಟಲು ವಶಪಡಿಸಿಕೊಂಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಎಂದಿನಿಂದ ವಶಪಡಿಸಿಕೊಳ್ಳಲಾಯಿತು.

ಇ) ಈ ಯೋಜನೆಯು ಎಂದಿನಿಂದ ಕಾರ್ಯಗತವಾಗಲಿದೆ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು).—

ಅ) ಹಾಸನದಲ್ಲಿ ಪ್ರಾದೇಶಿಕ ಕಾರ್ಯಾಗಾರವನ್ನು ನಿರ್ಮಿಸುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೯೨.೦೧ ಎಕರೆ ಜಮೀನನ್ನು ವಶಕ್ಕೆ ತೆಗೆದುಕೊಂಡಿದೆ. ಆದರೆ ಇದು ವಿಭಾಗೀಯ ಕಾರ್ಯಾಗಾರವನ್ನು ಕಟ್ಟುವುದಕ್ಕಲ್ಲ.

ಆ) ಆದಾಗ್ಯೂ ಈಗ ಪಡೆದಿರುವ ನಿವೇಶನವನ್ನು ಕಾರ್ಮಿಕರಿಗೆ ವಸತಿ ನಿರ್ಮಾಣ ಘಟಕ ನಿರ್ಮಾಣ, ಚಾಲಕರ ತರಬೇತಿ ಕೇಂದ್ರ ಹಾಗೂ ಇನ್ನಿತರ ಮುಂಬರುವ ಸಂಸ್ಥೆಗೆ ಸಂಬಂಧಿಸಿದ ವಿವಿಧ ಉದ್ದೇಶಕ್ಕಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ರಾಣೆಬೆನ್ನೂರು ತಾಲ್ಲೂಕು ಅಂತರವಳ್ಳಿ ಕೆರೆಯ ಬಗ್ಗೆ

೫೦. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕಿನ ಅಂತರವಳ್ಳಿ ಕೆರೆಯ ಕೆಲಸಕ್ಕೆ ಬೇಕಾದ ಅಂದಾಜು ಮೊತ್ತದ $\frac{1}{3}$ ಭಾಗದಷ್ಟು ಹಣವನ್ನು ಕೊಡುವುದಾಗಿ ಮಾನ್ಯ ಲೋಕೋಪಯೋಗಿ ಸಚಿವರು ವಾಗ್ದಾನ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಹಣವನ್ನು ಒದಗಿಸಲಾಗಿದೆಯೇ ?

ಇ) ಈ ಕೆರೆಯ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಶಾಸಕರಾದ ಶ್ರೀ ಕೆ. ಬಿ. ಕೋಳಿವಾಡರವರ ದಿನಾಂಕ ೧೧-೯-೧೯೯೦ರ ಮನವಿಯ ಮೇಲೆ ಮಾಜಿ ನೀರಾವರಿ ಮತ್ತು ಲೋಕೋಪಯೋಗಿ ಸಚಿವರು '$\frac{1}{3}$ನೇ ಭಾಗ ಅನುದಾನವನ್ನೊದಗಿಸಿ ಪಡೆದುಕೊಳ್ಳಲು' ಸೂಚಿಸಿರುತ್ತಾರೆ.

ಆ) ಇಲ್ಲ.

ಇ) ಯೋಜನೆಯ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿ, ಕಾಮಗಾರಿಯು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಶಕ್ಯವೆಂದು ಕಂಡುಬಂದಲ್ಲಿ ಯೋಜನೆಯನ್ನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ.

FINDINGS OF DAYAL COMMISSION

50. SRI K. B. KOLIWAD (Ranebennur) and PERIKAL M. MALLAPPA (Chickpet).—Will the Chief Minister be pleased to state ?

a) The findings of the Dayal Commission as to the specific role of Sri R. K. Hegde former Chief Minister of Karnataka in M.D. seat scandal ?

b) The action proposed to be taken by the Government in this regard ?

SRI S. BANGARAPPA (Chief Minister).—

a) The Commission found that the conduct of the then Chief Minister is unbecoming of a Chief Minister in protecting the citizens of the State and also held that the Chief Minister failed to take action on the complaint of Sri Bharathan given to him and further found that by giving press statements he tried to sheild his son and his relative Sri Udayshankar by using his influence. The commission has also found that the then Chief Minister got deleted the name of his son from the charge sheet filed by police on the complaint of Sri Bharathan, the father of Sudya Satyanathan.

b) The matter is being examined.